ತನ್ನ ಪರಿಚಯ ಹೇಳಿಕೊಂಡವರು ತಾತನನ್ನು ಪೊಲೀಸ್ ಠಾಣೆಗೆ ಬರಲು ಹೇಳಿದ್ದರು. ಪೂಜೆ ನಂತರ ಮಾತನಾಡುವುದಾಗಿಯೂ, ಕಾಫಿ ಕುಡಿದು ಸ್ವಲ್ಪ ಹೊತ್ತು ಕಾಯಿರಿ ಎಂದೂ ತಾತ ಕೇಳಿಕೊಂಡಿದ್ದರು. ನಮ್ಮ ವಂಶದ ಯಾವೊಬ್ಬ ವ್ಯಕ್ತಿಯೂ ಪೊಲೀಸ್ ಸ್ಟೇಷನ್ ಮೆಟ್ಟಿಲನ್ನು ತುಳಿದವರಲ್ಲ. ಪೊಲೀಸ್ ಸ್ಟೇಷನ್ ಮೆಟ್ಟಿಲು ತುಳಿದರೆ ದರಿದ್ರ ಬರ್ತದೆ ಅನ್ನೋ ನಂಬಿಕೆ ಇತ್ತು ನಮ್ಮಲ್ಲಿ ಆಗ. ಆದರೆ ಇನ್‌ಸ್ಪೆಕ್ಟರ್ ತುಂಬಾ ಕೋಪದಿಂದ ತಾತನ ಕೈ ಹಿಡಿದು ಎಳೆದಿದ್ದ. ತಾತ ಮುಗ್ಗರಿಸಿ ಬಿದ್ದಿದ್ದ. ತಾತನ ಕೈ ತರಚಿಹೋಗಿ ಹನಿ ರಕ್ತ ಕಾಣಿಸಿಕೊಂಡಿತ್ತು. ಹತ್ತಿರದಲ್ಲೇ ನಿಂತಿದ್ದ ಅಣ್ಣ ವೀರಾಂಜನೇಯರೆಡ್ಡಿಗೆ ಅದೆಂಥ ಕೋಪ ಬಂತೋ ಕಣದಲ್ಲಿ ಬಿದ್ದಿದ್ದ ಗಾಡಿಯ ನೊಗದಿಂದ ಇನ್‌ಸ್ಪೆಕ್ಟರ್ ತಲೆಗೆ ಎರಡು ಬಾರಿಸಿದ್ದ. ಅಷ್ಟೆ, ಇನ್‌ಸ್ಪೆಕ್ಟರ್ ಹೆಣವಾಗಿಬಿಟ್ಟಿದ್ದರು. ಅಣ್ಣ ಹಿಂದುಮುಂದು ನೋಡದೆ ಇನ್‌ಸ್ಪೆಕ್ಟರನ ಹೆಣವನ್ನು ಭತ್ತದ ಹುಲ್ಲಿನ ಬಣವೆಗೆ ಎಳೆದುಕೊಂಡು ಬಂದು ಬೆಂಕಿ ಹಚ್ಚಿಬಿಟ್ಟ. ರಾತ್ರಿ ಒಂಬತ್ತು ಗಂಟೆಯ ಹೊತ್ತಿಗೆ ಬಣವೆ ಉರಿದು ಬೂದಿಯಾಗಿತ್ತು. ಅಣ್ಣ ಕೋಲನ್ನು ತೆಗೆದುಕೊಂಡು ಬೂದಿಯನ್ನೆಲ್ಲ ಕೆದಕಿದ್ದ. ಇನ್‌ಸ್ಪೆಕ್ಟರನ ಸಣ್ಣ ಮೂಳೆಯೂ ಸಿಕ್ಕಿರಲಿಲ್ಲ. ಸಾಕ್ಷಿಯಿಲ್ಲದ ಕಾರಣ ಪೊಲೀಸರು ಕನಿಷ್ಠ ಅಣ್ಣನನ್ನು ಅರೆಸ್ಟ್ ಮಾಡಲೂ ಆಗಲಿಲ್ಲ. ಅಂದಿನಿಂದ ಸುಮಾರು ಮೂವತ್ತು ವರ್ಷಗಳ ಕಾಲ ಯಾವ ಪೊಲೀಸ್ ಅಧಿಕಾರಿಯೂ ಒಬ್ಬಂಟಿಯಾಗಿ ಈ ಮನೆ ಕಡೆ ಕಾಲಿಟ್ಟಿರಲಿಲ್ಲ…" ದಂತಕಥೆಯೊಂದನ್ನು ಕೇಳಿಸಿಕೊಂಡಂತಾಗಿತ್ತು ನನಗೆ. ರೀಸಸ್ ಮಾಡಿ ಬರಲೆಂದು ವಿಶ್ವನಾಥ ವೇಮುಲಶಾಸ್ತ್ರಿ ಕೆಳಗಿಳಿದು ಹೋಗಿದ್ದ. ತಕ್ಷಣ ನರಸಿಂಹರೆಡ್ಡಿ ನನ್ನ ಪಕ್ಕಕ್ಕೆ ಬಗ್ಗಿ, "ಅಣ್ಣಾ ನಿಮ್ಮ ಹತ್ತಿರ ಒಂದು ರಿಕ್ವೆಸ್ಟ್ ಇಟ್ಟಿದ್ದಾರೆ. ವೇಮುಲಶಾಸ್ತ್ರಿಗೆ ಗೊತ್ತಾಗಬಾರದು…" ಮೆಲ್ಲಗೆ ಕೇಳಿದ್ದರು.

"ಹೇಳಿ…" ಎಂದಷ್ಟೇ ಹೇಳಿದ್ದೆ.

"ನಾಳಿದ್ದು ಪ್ರತಾಪಸಿಂಹರೆಡ್ಡಿನ ವಿಚಾರಣೆಗೆ ಜೈಲಿನಿಂದ ಡಿಸ್ಟ್ರಿಕ್ಟ್ ಕೋರ್ಟ್‌ಗೆ ಕರೆದುಕೊಂಡು ಹೋಗ್ತಾರೆ. ವಿಚಾರಣೆ ಮುಗಿದು ಅವನಿಗೆ ಸೆಂಟ್ರಲ್ ಜೈಲಾದರೆ ಹೈದರಾಬಾದಿನ ಚಂಚಲಗೂಡ ಜೈಲಿಗೋ, ಚೆರ್ಲಪಲ್ಲಿ ಜೈಲಿಗೋ ಹಾಕುತ್ತಾರೆ. ಪೊಲೀಸರ ಹತ್ತಿರ ಅವನನ್ನು ಅಪರಾಧಿಯಾಗಿ ನಿರೂಪಿಸಲು ವಿಪರೀತ ಎವಿಡೆನ್ಸ್‌ಗಳಿವೆ. ಜೊತೆಗೆ ಆ ಜೈಲು ಮಿನಿಸ್ಟರ್ ಇದಾನಲ್ಲ ಅವನಿಗೆ ನಮ್ಮ ಏಳಿಗೆಯನ್ನು ಕಂಡರಾಗದು. ನಮ್ಮ ಆಲೆಮನೆಯಲ್ಲಿ ಕೆಲಸಮಾಡಿಕೊಂಡು ನಾಲ್ಕು ವರ್ಷಗಳಿದ್ದ. ಚುನಾವಣೆಲಿ ಸಪೋರ್ಟ್ ಕೂಡ ಮಾಡಿದ್ದೆವು. ಸುವ್ವರ್ ನನ್ಮಗ. ಆ ಕೃತಜ್ಞತೆ ಒಂದಿಷ್ಟೂ ಅವನಲ್ಲಿ ಇಲ್ಲ. ನಮ್ಮ ಕುಟುಂಬಕ್ಕೆ ರಾಜಕೀಯ ಮತ್ತು ಸರ್ಕಾರಿ ನೌಕರಿಯೆಂದರೆ ಆಗಲ್ಲ. ಬೇರೆಯವರಿಗೆ ಕೈ ಮುಗಿಯೋದು, ಮೋಸ ಮಾಡೋದು ನಮ್ಮ ವಂಶದ ರಕ್ತದಲ್ಲೆ ಅಂಟಿಬಂದಿಲ್ಲ. ಚೆರ್ಲಪಲ್ಲಿ ಜೈಲು ಕಟ್ಟಿರುವ ಪೂರ್ತಿ ಜಾಗ ನಮ್ಮದೇ. ಚೆಂಚಲಗೂಡ ಜೈಲಿಗೂ ಎರಡೆಕರೆ ದಾನ ಮಾಡಿರುವ ಪತ್ರವನ್ನು ಇವೊತ್ತು ಅಣ್ಣಾ ನನಗೆ ತೋರಿಸಿ ಕಣ್ಣೀರಿಟ್ಟರು. ನಿಮ್ಮ ಸ್ನೇಹಿತ ಕೃಷ್ಣ ಮನೋಹರ್‌ಗೆ ಹೇಳಿ ಪ್ರತಾಪಸಿಂಹರೆಡ್ಡಿನ ಎನ್‌ಕೌಂಟರ್ ಮಾಡಿಸಬಹುದೆ. ಅವನು ಜೈಲಿನಲ್ಲಿ ನರಳುತ್ತಾ ಬದುಕುವುದನ್ನು ಅಣ್ಣನಿಗೆ ಭರಿಸಲು ಸಾಧ್ಯವಾಗುವುದಿಲ್ಲ. ಒಂದು ಸಾರಿ ಪ್ರಾಣಹೋದರೆ ನಮ್ಮ ಮನೆಯಲ್ಲಿ ಅವನು ಹುಟ್ಟಿಯೇ ಇರಲಿಲ್ಲ ಎಂದು ಸಮಾಧಾನ ಮಾಡಿಕೊಂಡು ಮರೆತೇ ಬಿಡುತ್ತೇವೆ. ಔಟ್ ಆಫ್ ಸೈಟ್ ಈಜ್ ಔಟ್ ಆಫ್ ಮೈಂಡ್. ನಮ್ಮ ಕುಟುಂಬದ ಹೆಸರು ಎಲ್ಲೂ ಬರಬಾರದು. ಬೆಂಗಳೂರಿನ ಅರ್ಧ ಎಕರೆ ಜಮೀನನ್ನು ನಿಮ್ಮ ಹೆಸರಿಗೆ ದಾನಪತ್ರ ಮಾಡಲಾಗಿದೆ. ಅಣ್ಣನ ಸಹಿಮಾಡಿ ಬೆಂಗಳೂರಿನ ನಿಮ್ಮ ಅಡ್ರೆಸ್ಸಿಗೆ ಮಧ್ಯಾಹ್ನವೇ ಕೊರಿಯರ್ ಮಾಡಲಾಯಿತು…" ಕೆಳಗೆ ಹೋಗಿದ್ದ ವೇಮುಲಶಾಸ್ತ್ರಿ ಮೇಲೆ ಬರುವುದರೊಂದಿಗೆ ನರಸಿಂಹರೆಡ್ಡಿ ಮಾತು ನಿಲ್ಲಿಸಿದ್ದರು.